ಮುಚ್ಚಿಕೊಂಡವು. ಹೆಂಡತಿಯ ಭಯಾನಕ ಚೀತ್ಕಾರ ಕೇಳಿ ಅವನಿಗೆ ಒಮ್ಮೇಲೆ ಎಚ್ಚರವಾಯಿತು. ಅವನು ಧಡ್ಡನೆ ಎದ್ದು ಕುಳಿತ.

'ಕೋತಿಯ ಪಂಜ!' ಮಿಸೆಸ್ ವೈಟ್ ಚೀರಿಕೊಂಡಳು.

ಅವನು ಅರ್ಥವಾಗದೆ ಕಕ್ಕಾಬಿಕ್ಕಿಯಾದ. 'ಪಂಜ?... ಎಲ್ಲಿದೆ? ಏನಾಯ್ತು?'

ಆಕೆ ಎದ್ದು ಅವನ ಬಳಿಗೆ ಬಂದಳು. ಅವಳ ದನಿಯಲ್ಲಿ ಉದ್ವೇಗವಿತ್ತು.

'ನನಗೆ ಆ ಕೋತಿಯ ಪಂಜ ಬೇಕು. ಅದು ಎಲ್ಲಿದೆ? ನೀವು ಬೆಂಕಿಗೆ ಎಸೆದಿಲ್ಲ ತಾನೆ?'

'ಅದು ಹಜಾರದ ಸ್ಟ್ಯಾಂಡಿನ ಮೇಲೆಯೇ ಇದೆ. ಏಕೆ? ಏನಾಯ್ತೀಗ?' ಅವನು ಆಶ್ಚರ್ಯದಿಂದ ಕೇಳಿದ. ಮಿಸೆಸ್ ವೈಟ್ ಹುಚ್ಚಳಂತಾಡುತ್ತಿದ್ದಳು. ಸ್ವಲ್ಪ ಹೊತ್ತು ಅಳುತ್ತಿದ್ದಳು. ಮತ್ತೊಮ್ಮೆ ನಗುತ್ತಿದ್ದಳು. ಆಕೆ ಬಗ್ಗಿ ಅವನ ಕೆನ್ನೆಗೆ ಮುತ್ತಿಕ್ಕಿದಳು. ಅವನು ಕಕ್ಕಾಬಿಕ್ಕಿಯಾಗಿ ಅವಳನ್ನೇ ಗಮನಿಸಿದ.

'ನನಗೊಂದು ವಿಚಾರ ಹೊಳೆಯಿತು.' ಆಕೆ ಹೇಳಿದಳು, 'ಈ ಮೊದಲು ಅದು ಯಾಕೆ ಹೊಳೆಯಲಿಲ್ಲವೆಂದು ಅರ್ಥವಾಗುತ್ತಿಲ್ಲ. ನಿಮಗೂ ಹೊಳಿಲಿಲ್ಲ ನೋಡಿ...'

'ಅದೆಂತಾ ವಿಚಾರ ಮಾರಾಯ್ತಿ?'

'ನಮ್ಮವು ಮತ್ತೂ ಎರಡು ಕೋರಿಕೆಗಳಿವೆ. ಮರೆತಿರಾ? ನಾವು ಕೋತಿಯ ಪಂಜದ ಬಳಿ ಒಂದೇ ಒಂದು ಕೋರಿಕೆಯನ್ನು ಇಟ್ಟಿದ್ದು.'

'ಆ ಒಂದು ಕೋರಿಕೆಯಿಂದಲೇ ನಡೆದ ಅನಾಹುತ ಸಾಕಾಗಲಿಲ್ಲವೇನೇ ಮಾರಾಯ್ತಿ?' ಅವನ ಕಣ್ಣುಗಳು ತೇವಗೊಂಡವು.

'ಇನ್ನು ಏನು ತಾನೆ ಉಳಿದುಕೊಂಡಿದೆ ಎನ್ನುತ್ತೀರ? ಕೆಳಗೆ ಹೋಗಿ ಆ ಕೋತಿಯ ಪಂಜವನ್ನು ತನ್ನಿ. ನಮ್ಮ ಹುಡುಗ ಮತ್ತೆ ಜೀವಂತವಾಗಿ ವಾಪಸ್ಸು ಬರುವಂತೆ ಕೇಳಿಕೊಳ್ಳೋಣ ಕಣ್ರಿ... ಬೇಗ.'

ಮಿಸ್ಟರ್ ವೈಟ್ ರಗ್ಗನ್ನು ಕಿತ್ತೆಸೆದು ಧಡಕ್ಕನೆ ಎದ್ದು ನಿಂತ. 'ನೀನೂ... ಬಿಡೆ. ಪರವಾಗಿಲ್ಲ!' ಅವನು ಬೆಂಕಿಪೊಟ್ಟಣಕ್ಕಾಗಿ ತಡವತೊಡಗಿದ.

'ಬೇಗ ಹೋಗ್ರಿ... ಅದಷ್ಟು ಬೇಗ ಅವನು ಬರುವಂತೆ ಕೋರಿಕೆ ಸಲ್ಲಿಸಿ' ಎಂದು ಅವಸರಿಸಿದಳು.

'ನೀನು ಏನು ಕೇಳಿಕೊಳ್ಳುತ್ತಿದ್ದೀಯ ಎನ್ನುವುದು ಅರಿಯಲಾರೆ ಹೆಂಗಸೇ... ಈಗ ಬೇಗ ಮಂಚ ಹತ್ತಿ ಹೊದೆದುಕೊ. ಜಾಸ್ತಿ ಹೊತ್ತು ಹೊರಗೆ ನಿಲ್ಲಬೇಡ.'

'ನಮ್ಮ ಮೊದಲ ಕೋರಿಕೆ ಜಾರಿಯಾಗಿದೆ ತಾನೆ? ಇನ್ಯಾಕೆ ಅನುಮಾನ?' ಮಿಸೆಸ್ ವೈಟ್ ತರ್ಕಿಸಿದಳು.

'ಅದು ಒಂದು ಸಂಯೋಗ ಅಥವಾ ಕಾಕತಾಳೀಯ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.'

'ಇರಲಿ. ನೀವು ಆ ಪಂಜವನ್ನು ತನ್ನಿ. ಮಗ ಜೀವಂತವಾಗಿ ಮನೆಗೆ ಬರಲಿ ಎಂದು ಕೇಳಿಕೊಳ್ಳುವುದರಲ್ಲಿ ಏನು ನಷ್ಟ?' ಆಕೆ ಅವನ ತರ್ಕವನ್ನು ಕೇಳಲು ಸಿದ್ಧಳಿರಲಿಲ್ಲ.

'ನೋಡು ಮಾರಾಯ್ತಿ, ಹರ್ಮನ್ ನಿಧನನಾಗಿ ಇಂದಿಗೆ ಎರಡು ವಾರಗಳು ಸಂದವು. ಅವನು ಧರಿಸಿದ್ದ ಸಮವಸ್ತ್ರ ಬಿಟ್ಟರೆ ಅವನನ್ನು ಗುರುತು ಹಿಡಿಯಲಾರದಷ್ಟು ಛಿದ್ರವಾಗಿತ್ತು ಅವನ ಶರೀರ. ಆವಾಗಲೇ ನಿನ್ನಿಂದ ಅವನನ್ನು ನೋಡಲಾಗುತ್ತಿಲ್ಲ ಎನ್ನುತ್ತಿದ್ದೆ. ಈಗ ಅವನನ್ನು ನೋಡಲು ಸಾಧ್ಯವಾಗುವುದೇ? ಯೋಚಿಸು.'

'ನೀವು ಅವನನ್ನು ಮೊದಲು ಕರೆಸಿ. ಹೆತ್ತು, ಹಾಲುಣಿಸಿ ಅವನನ್ನು ಬೆಳೆಸಿದ್ದೇನೆ. ನಾನು